ಶ್ರೀ ಬಿ. ಹುಚ್ಚೇಗೌಡ.—ಮತ್ತು ಆ ಸ್ಥಳಗಳಲ್ಲಿ ಎರಡಾಣೆಯಂತೆ ವಸೂಲು ಮಾಡಬೇಕೇ, ಒಂದಾಣೆಯಂತೆ ವಸೂಲು ಮಾಡಬೇಕೇ ಎಂಬುದಾಗಿ ಜಿಜ್ಞಾಸೆ ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ನ್ಪಷ್ಟವಾಗಿ ತಿಳಿವಳಿಕೆ ಕೊಟ್ಟಿದ್ದೇವೆ. ಸ್ಪೆಷಲ್ ಸೆಸ್ಸ್, ರೋಕರ್ ಸೆಸ್ಸ್ ಎರಡೂ merge ಮಾಡಿ ಎರಡಾಣೆ ಪ್ರಕಾರ ವಸೂಲು ಮಾಡಬೇಕು, ಅರು ಕಾಸಿನಂತೆ ವಸೂಲು ಮಾಡುತ್ತಾ ಇದ್ದುದನ್ನು ವಸೂಲು ಮಾಡಕೂಡದು ಎಂಬುದಾಗಿ ಸೂಚನೆ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದ ಆರ್ಡರ್ ಸ್ಪಷ್ಟವಾಗಿರಬಹುದು, ಸರಿಯಾಗಿ ಜಾರಿ ಆಯಿತೇ, ಇಲ್ಲವೇ, ಎಷ್ಟುಮಟ್ಟಿಗೆ ಜಾರಿ ಆಗಿದೆ ಎಂಬುದನ್ನು ನೋಡಿಕೊಳ್ಳಬೇಕು. ಒಂದು ವರ್ಷದಿಂದ ಈ ಪ್ರಶ್ನೆ ಹಾಕುತ್ತಾ ಇದ್ದೇನೆ. ಇದು ಸರಿಯಾದ ರೀತಿಯಲ್ಲಿ ಜಾರಿ ಆಗದೇ ಹೆಚ್ಚಿಗೆ ವಸೂಲಾಗುತ್ತಾ ಇದ್ದ ಪಕ್ಷದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದದ್ದು ಸರ್ಕಾರದವರ ಕರ್ತವ್ಯವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಹೆಚ್ಚಿಗೆ ವಸೂಲು ಮಾಡಿದ್ದರೆ, ಹೆಚ್ಚಿಗೆ ವಸೂಲಾದ ಮೊಬಲಗನ್ನು ರೀಫಂಡ್ ಮಾದಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದ ಆರ್ಡರ್ ಸರಿಯಾಗಿ ಜಾರಿ ಆಗುತ್ತಾ ಇಲ್ಲ ಎಂದು ಹೇಳುತ್ತೇನೆ. ಕಂದಾಯದ ವಸೂಲಯೊಳಗೆ ಇಷ್ಟು ಅನಾದರಣೆ ಆದರೆ ಬಾಕಿ ವಿಷಯಗಳಲ್ಲಿ ಎಷ್ಟುಮಟ್ಟಿಗೆ ಮನ್ನಣೆ ಕೊಡುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು.

ಶ್ರೀ ಟಿ. ಚನ್ನಯ್ಯ.—ಆರ್ಡರ್ ಜಾರಿಗೆ ಕೊಟ್ಟು ಕ್ರಮ ಬದ್ಧವಾಗಿ ವಸೂಲು ಮಾಡುತ್ತಾ ಇದ್ದಾರೆ.

Amount Collected from Atchkatdars of Hutchavvanahalli Tank, Davangere Taluk.

Q.—263. **Sri G. DUGGAPPA** (Holalkere—Scheduled Castes).—

Will the Government be pleased to state :—

(*a*) whether Rs. 3,100 has been collected from the Atchkatdars of Hutchavvanahalli Tank in Davangere Taluk ;

(*b*) the purpose for which the amount was collected ;

(*c*) whether the amount has been spent for the purpose for which it was collected ?

A.—**Sri Kadidal MANJAPPA** (Minister for Revenue and Public Works).—

(*a*) A sum of Rs. 2,083-11-3 has been collected.

(*b*) For improvements to the channels and repairs to the sluice of Hutchavvanahally Tank.

(*c*) Yes.

Sri G. DUGGAPPA.—I have no supplementaries.

Land grant under Tunga Ane Channel.

Q.—283. **Sri N. HUCHMASTHY GOWDA** (Huliyurdurga).—

Will the Government be pleased to state :—

(*a*) the number of acres of waste land that was in their possession at the time of beginning the Ane work behind Tunga Ane Channel (forest, gomal, amrith mahal kaval or any other kind of waste land) ;

(*b*) of this, the number of acres of land given for cultivation ;

(*c*) out of the lands so given, the number of acres of land obtained by the Government officers either in their name or in the name of their relatives ?

A.—**Sri Kadidal MANJAPPA** (Minister for Revenue and Public Works).—

(*a*)		*A.*	*G.*
Amrith Mahal Kaval or other kind	...	141	15
Forest	...	60	00
Gomal	...	593	10
Total	...	793	25

(*b*) 3 acres 29 guntas.

(*c*) No.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನು ಈ ನಾಲೆಯ ಹಿಂದೆ ಇರತಕ್ಕ ಒಟ್ಟು ಆಚ್ಚುಕಟ್ಟಿನ ವಿಷಯ ಕೇಳಿದ್ದಕ್ಕೆ 793 ಎಕರೆ 25 ಗುಂಟೆ ಎಂದು ಉತ್ತರ ಕೊಟ್ಟಿದ್ದೀರಿ. ಈ ನಾಲೆಯ ಹಿಂದೆ 20 ಸಾವಿರ ಎಕರೆಗೆ ಮೇಲ್ಪಟ್ಟು ಆಚ್ಚುಕಟ್ಟು ಆಗುತ್ತದೆ ಎಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಏನು ಪ್ರಶ್ನೆ ಕೇಳಿದ್ದಿರೋ ಅದಕ್ಕೆ ತಕ್ಕ ಉತ್ತರ ಕೊಟ್ಟಿದೆ. ಅಣೆಕೆಲಸ ಪ್ರಾರಂಭ ಮಾಡಿದಾಗ ಅಷ್ಟಿತ್ತು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಅಣೆಯಿಂದ ಅಷ್ಟು ಎಕರೆ ಜಮೀನು ಆಚ್ಚುಕಟ್ಟಿಗೆ ಬರುತ್ತದೆ ಎಂಬ ನೀರಿಕ್ಷೆಯ ಮೇಲೆ ಸರ್ಕಾರಿ ನೌಕರರನೇಕರು ತಮಗೂ ಜಮೀನು ಸಿಕ್ಕುತ್ತದೆ ಎಂಬ ಉದ್ದೇಶದಿಂದ ಕೆಲಸ ಮಾಡುತ್ತಾ ಇದ್ದಾರೆ ಎಂಬುದನ್ನು ಸರ್ಕಾರದ ವರ ಗಮನಕ್ಕೆ ತರುವುದಕ್ಕೋಸ್ಕರ ಈ ಪ್ರಶ್ನೆಯನ್ನು ಕಳುಹಿಸಿದೆ. ಈ ಅಣೆ ಕಟ್ಟುವ ಸಂದರ್ಭದಲ್ಲಿ ಈ ಹಿಂದೆ ಸ್ವಲ್ಪ ದಿವಸಕ್ಕೆ ಪೂರ್ವಭಾವಿಯಾಗಿ ಈ ಜಮೀನುಗಳನ್ನು ಎಷ್ಟು ಜನ ತೆಗೆದುಕೊಂಡಿದ್ದಾರೆ ಎಂಬು